## ಬೆಳದಿಂಗಳ ಸಂಗೀತ 194

3 ಡಿಸೆಂಬರ್ 2017

## ಕೊಳಲು–ಚಿತ್ರವೀಣಾ

**ಕೊಳಲು**

ವಿದುಷಿ ಶಾಂತಲಾ ಸುಬ್ರಹ್ಮಣ್ಯಂ

**ಚಿತ್ರವೀಣಾ**

ವಿದ್ವಾನ್ ವಿಶಾಲ್ ಆರ್. ಸಪೂರಂ

**ಮೃದಂಗ**

ವಿದ್ವಾನ್ ಕೆ.ಯು. ಜಯಚಂದ್ರರಾವ್

ವಿದ್ವಾನ್ ಅನಿರುದ್ಧ್ ಭಟ್

**ತಮಗೆ ಆದರದ ಸ್ವಾಗತ**

ಫೋನ್: 0821-2548220, 2548221

ಫ್ಯಾಕ್ಸ್: 0821-2548219, ಇಮೇಲ್: jssashram@yahoo.com

# ಶ್ರೀ ಸುತ್ತೂರು ಮಠ

ಮೈಸೂರು ಶಾಖೆ, ಚಾಮುಂಡಿ ಬೆಟ್ಟದ ತಪ್ಪಲು

# ಬೆಳದಿಂಗಳ ಸಂಗೀತ 193

**4 ನವೆಂಬರ್ 2017 * ಶನಿವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ದ್ವಂದ್ವ ವಯೊಲಿನ್ ವಾದನ



ಖ್ಯಾತ ವಯೊಲಿನ್ ವಿದ್ವಾಂಸರಾದ

ಮೈಸೂರು ಶ್ರೀ ಎಸ್. ಮಹದೇವಪ್ಪನವರ ಮೊಮ್ಮಕ್ಕಳಾದ

**ಮೈಸೂರು ಕಾರ್ತಿಕ್ ಮತ್ತು ಮಾಸ್ಟರ್ ಸುಮಂತ್**



ಮೃದಂಗ

**ಕಲೈಮಾಮಣಿ ವಿದ್ವಾನ್ ತಿರುವಾರೂರು ಭಕ್ತವತ್ಸಲಂ**

ಚೆನ್ನೈ

ಘಟಂ

**ವಿದ್ವಾನ್ ಗಿರಿಧರ್ ಉಡುಪ**

ಬೆಂಗಳೂರು



---

ಮೈಸೂರು ನಗರದ ಸಂಗೀತಕ್ಷೇತ್ರದ ದಿಗ್ಗಜರಲ್ಲೊಬ್ಬರಾದ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪುರಸ್ಕೃತ ಪಿಟೀಲು ವಿದ್ವಾನ್ ಶ್ರೀ ಮಹದೇವಪ್ಪನವರ ಮೊಮ್ಮಕ್ಕಳಾದ ಶ್ರೀ ಮೈಸೂರು ಕಾರ್ತಿಕ್ (ವಿದ್ವಾನ್ ಮೈಸೂರು ಎಂ. ನಾಗರಾಜ್‌ರವರ ಮಗ) ಮತ್ತು ಮಾಸ್ಟರ್ ಸುಮಂತ್ (ಡಾ. ಮೈಸೂರು ಮಂಜುನಾಥ್‌ರವರ ಮಗ) ಅಭಿಜಾತ ಕಲಾವಿದರು. ಸಂಗೀತದ ಹಿನ್ನೆಲೆಯ ಮನೆತನದಿಂದ ಬಂದಿರುವ ಇಬ್ಬರಿಗೂ ಅವರವರ ತಂದೆಯವರೇ ಗುರುಗಳು. ಮೂರನೆಯ ತಲೆಮಾರಿನ ಈ ಯುವ ಪ್ರತಿಭೆಗಳು ವಯೊಲಿನ್ ವಾದನದಲ್ಲಿ ಈಗಾಗಲೇ ಅಸಾಧಾರಣ ಸಂಚಲನವನ್ನು, ಭರವಸೆಯನ್ನು ಮೂಡಿಸಿದ್ದಾರೆ.

ಶ್ರೀ ಮೈಸೂರು ಕಾರ್ತಿಕ್ ಆಕಾಶವಾಣಿ "ಎ" ಶ್ರೇಣಿಯ ಕಲಾವಿದರಾಗಿದ್ದಾರೆ. ಮಾಸ್ಟರ್ ಸುಮಂತ್‌ರೊಡನೆ ಈಗಾಗಲೇ ನೂರಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕರ್ನಾಟಕ ಮತ್ತು ಹೊರ ರಾಜ್ಯಗಳಲ್ಲಿ ಕಚೇರಿ ನೀಡಿ ಸಂಗೀತದ ವಲಯದಲ್ಲಿ ಸುಪರಿಚಿತರಾಗಿದ್ದಾರೆ. ಹಲವಾರು ಪ್ರತಿಷ್ಠಿತ ಬಹುಮಾನಗಳನ್ನು ಗಳಿಸಿದ್ದಾರೆ. ಹಲವಾರು ಸಂಗೀತ ಸಭೆಗಳಲ್ಲಿ ತಮ್ಮ ವಿದ್ವತ್ತನ್ನು, ರಂಜನೀಯತೆಯನ್ನು ಪ್ರಸ್ತುತಪಡಿಸಿದ್ದಾರೆ. ಸೃಜನಶೀಲತೆ, ಶಾಸ್ತ್ರಶುದ್ಧತೆ ಮತ್ತು ಪ್ರಯೋಗಶೀಲತೆಗಳಿಂದ ರಸಿಕರು ಮತ್ತು ವಿಮರ್ಶಕರಿಂದ ಅಪಾರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಅಂತಾರಾಷ್ಟ್ರೀಯ ಪ್ರಸಿದ್ಧಿ ಹೊಂದಿರುವ ಮೃದಂಗ ವಿದ್ವಾಂಸರಾದ ಕಲೈಮಾಮಣಿ ವಿದ್ವಾನ್ ಶ್ರೀ ತಿರುವಾರೂರು ಭಕ್ತವತ್ಸಲಂರವರು ಲಯವಾದ್ಯ ಕ್ಷೇತ್ರದಲ್ಲಿ ಅಪಾರ ವಿದ್ವತ್ತನ್ನೂ, ಖ್ಯಾತಿಯನ್ನೂ ಗಳಿಸಿರುವ ಹಿರಿಯ ಕಲಾವಿದರು.

ಘಟಂ ವಿದ್ವಾಂಸರಾದ ವಿದ್ವಾನ್ ಗಿರಿಧರ ಉಡುಪರವರು ಅಂತಾರಾಷ್ಟ್ರೀಯ ಖ್ಯಾತಿಯ ಮತ್ತೊಬ್ಬ ಕಲಾವಿದರು, ಇವರು ಲಯತರಂಗ ಸಂಸ್ಥೆಯ ಹಿಂದಿನ ಸ್ಫೂರ್ತಿಯಾಗಿದ್ದಾರೆ. ಈ ಇಬ್ಬರು ಕಲಾವಿದರೂ ಈ ಕಛೇರಿಗೆ ಪಕ್ಕವಾದ್ಯ ಸಹಕಾರ ನೀಡಲಿದ್ದಾರೆ.